**OS 27/2019**
**PW1**

ದಿನಾಂಕ:24.02.2026ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ಸವಾಲು**: 9**ನೇ ಪ್ರತಿವಾದಿ ಪರ ಶ್ರೀಮತಿ ಬಿ ವಿ ಎ ವಕೀಲರಿಂದಃ</u>

ನಾನು 9ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಂದೆಗೆ 7 ಜನ ಮಕ್ಕಳು ಅವರಲ್ಲಿ 3 ಗಂಡು 4 ಹೆಣ್ಣು ಮಕ್ಕಳು. ನನ್ನ ತಂದೆ ಬದುಕಿದ್ದಾಗ 3 ಜನ ಹೆಣ್ಣುಮಕ್ಕಳಿಗೆ ಮತ್ತು 2 ಗಂಡು ಮಕ್ಕಳಿಗೆ ಮದುವೆ ಮಾಡಿದ್ದರು. ಅವರು 3ನೇ ಪ್ರತಿವಾದಿ ಮತ್ತು ವಾದಿಯ ಗಂಡ. ಪ್ರೇಮ ರವರ ಮದುವೆ 1971 ರಲ್ಲಿ ಆಗಿರುತ್ತದೆ. ತಮ್ಮಣ್ಣರವರು ಮದುವೆ 1986 ರಲ್ಲಿ ಆಗಿರುತ್ತದೆ. 1 ರಿಂದ 3ನೇ ವಾದಿಯವರು ಬೆಂಗಳೂರಿನಲ್ಲಿ ಸುಮಾರು 40 ವರ್ಷದಿಂದ ವಾಸ ಇದ್ದಾರೆ. ನನಗೆ 2 ಹೆಣ್ಣುಮಕ್ಕಳು ಒಬ್ಬ ಮಗ ಇದ್ದಾನೆ. ನನ್ನ ಮಕ್ಕಳು ಬೆಂಗಳೂರಿನಲ್ಲಿ ವಾಸ ಇದ್ದಾರೆ. 2ನೇ ಪ್ರತಿವಾದಿ ಮೈಸೂರಿನಲ್ಲಿ ಮತ್ತು 3ನೇ ಪ್ರತಿವಾದಿ ಚನ್ನಪಟ್ಟಣದಲ್ಲಿ ವಾಸ ಇದ್ದಾರೆ. 4ನೇ ಪ್ರತಿವಾದಿ ಎಸ್ ಎಂ ದೊಡ್ಡಿಯಲ್ಲಿ ವಾಸ ಇದ್ದಾರೆ. 5ನೇ ಪ್ರತಿವಾದಿ ಅಮ್ಮಣ್ಣಿ ದೊಡ್ಡಿಯಲ್ಲಿ ವಾಸ ಇದ್ದಾರೆ. 6 ರಿಂದ 8 ನೇ ಪ್ರತಿವಾದಿಗಳು ಎಸ್ ಎಂ ದೊಡ್ಡಿಯಲ್ಲಿ ವಾಸ ಇದ್ದಾರೆ. ಮದುವೆಯಾದಾಗ ಒಟ್ಟು ಕುಟುಂಬದಲ್ಲಿ ಇದ್ದೇವು. ಆಗ ನನ್ನ ತಂದೆಯವರು ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದರು. ನನ್ನ ತಂದೆಗೆ 7 ಎಕರೆ ಜಮೀನು ಇತ್ತು. ಎಲ್ಲಾ ಜಮೀನು ಬೇರೆ ಬೇರೆ ಕಡೆ ಇದ್ದವು.

2. ನಾನು ಸರ್ವೆ ನಂ 118/5, 23/4 ರಲ್ಲಿ ವ್ಯವಸಾಯ ಮಾಡಿಕೊಂಡಿದ್ದೇನೆ. ವಂಶವೃಕ್ಷವನ್ನು ನಾನು ಹೇಳಿ ಬರೆಸಿದ್ದೇನೆ. ಈ ದಾವೆ ಹಾಕಲು ನಾವೇ ಮಾಹಿತಿ ಕೊಟ್ಟಿದ್ದೇವೆ. ನನ್ನ ಅಕ್ಕ ವೀಣಾ ರವರಿಗೆ ಸರ್ವೆ ನಂ 358 ಮತ್ತು 359 ಮಾರಾಟ ಮಾಡಿದ ವಿಚಾರ ಗೊತ್ತಿಲ್ಲ. ನನಗೆ 2018 ರಲ್ಲಿ ಮಾರಾಟ ಮಾಡಿದ ವಿಚಾರ ಗೊತ್ತಾಯಿತು. ಗೊತ್ತಾದಾಗ ಖಾತೆ ರದ್ದು ಪಡಿಸಲು ಅರ್ಜಿ ಸಲ್ಲಿಸಿರುವುದಿಲ್ಲ. 1ನೇ ವಾದಿ ಗಂಡ ಮರಣ ಹೊಂದಿದ್ದು ಸುಮಾರು 12 ರಿಂದ 13 ವರ್ಷ ಆಗಿರುತ್ತದೆ. 1ನೇ ವಾದಿ ಗಂಡ ದಿ 17.08.2005 ರಲ್ಲಿ ಮೃತ ಪಟ್ಟಿದ್ದು ಅಲ್ಲಿಂದಲೂ 1 ರಿಂದ

3ನೇ ವಾದಿಗಳು ಬೆಂಗಳೂರಿನಲ್ಲಿ ವಾಸ ಇದ್ದಾರೆ ಎಂದರೇ ಹೌದು. ನನ್ನ ತಂದೆ 1989 ರಲ್ಲಿ ಮೃತ ಪಟ್ಟಿರುತ್ತಾರೆ. ನನ್ನ ಅಕ್ಕ ಪ್ರೇಮ ರವರು 2002 ರಲ್ಲಿ ಮೃತಪಟ್ಟಿರುತ್ತಾರೆ. 6 ರಿಂದ 8ನೇ ಪ್ರತಿವಾದಿಯವರು 9ನೇ ಪ್ರತಿವಾದಿಗೆ ಯಾವ ಕಾರಣಕ್ಕೆ ಕ್ರಯ ಮಾಡಿದ್ದಾರೆ ಎಂದರೇ ಗೊತ್ತಿಲ್ಲ. 9ನೇ ಪ್ರತಿವಾದಿಗೆ ಮಾರಾಟ ಮಾಡಿದ ಸ್ವತ್ತು ರಸ್ತೆಗೆ ಹೊಂದಿಕೊಂಡಿದೆ ಎಂದರೇ ಹೌದು. ದಿ 08.09.2018 ರಲ್ಲಿ ಪಂಚಾಯಿತಿ ನಮ್ಮ ಮನೆಯಲ್ಲಿ ನಡೆದಿರುತ್ತದೆ. ಆಗ ಪಂಚಾಯಿತಿ 3ನೇ ಪ್ರತಿವಾದಿ, ಆನಂದ ಸ್ವಾ ಮಿ, ಮಂಜುನಾಥ ಮತ್ತು ಇತರರು ಇದ್ದರು.

3. ನಿಮ್ಮ ತಂದೆ ತೀರಿದ ನಂತರ ನೀವೇ ಭಾಗ ಆದ ಸ್ವತ್ತಿನ ಸ್ವಾ ಧೀನ ಹೊಂದ್ದೀರಿ ಎಂದರೇ ಭಾಗ ಆಗಿರುವುದಿಲ್ಲ. ಆದರೆ ಒಂದೊಂದು ಸರ್ವೆ ನಂಬರ್ ನಲ್ಲಿ ನಾವೇ ವ್ಯವಸಾಯ ಮಾಡುತ್ತಿದ್ದೇವೆ. ಸರ್ವೆ ನಂ 358 ಮತ್ತು 359 ಕ್ಕೆ ಸಂಬಂದ ಪಟ್ಟಂತೆ ದಾಖಲೆ ಕೊಟ್ಟಿದ್ದೇನೆ. 8 ಮತ್ತು 9ನೇ ಅನುಸೂಚಿ ಸ್ವತ್ತು ದಿ 07.03.2007 ರಲ್ಲಿ 9ನೇ ಮಾರಾಟ ಆಗಿದೆ ಎಂದರೇ ಗೊತ್ತಿಲ್ಲ. ಪಾರ್ವತಮ್ಮ ನನ್ನ ತಾಯಿ. ಎಂ ಸಿ ಮುದ್ದಪ್ಪ, ತಮ್ಮಣ್ಣ ನನ್ನ ಅಣ್ಣಂದಿರು. ಪೌತಿ ಖಾತೆ ಮಾಡಲು ಯಾವುದೇ ತಕಾರರು ಇಲ್ಲ ಎಂದು ತಿಳಿಸಿದ್ದೇವೆ ಎಂದರೆ ಗೊತ್ತಿಲ್ಲಾದ ಆಗೇ ಸಹಿ ಪಡೆದಿದ್ದಾರೆ. ದಿ 25.04.1989 ರಲ್ಲಿ 3ನೇಪ್ರತಿವಾದಿಗೆ ಸರ್ವೆ ನಂ 7, 8, 118/5, 379/2, 271/2 3ನೇ ಪ್ರತಿವಾದಿಗೆ ಮತ್ತು ಶ್ರೀಮತಿ ಪ್ರೇಮ ರವರಿಗೆ ಸರ್ವೆ ನಂ 357, 358, 23/4, ಅವರ ಹೆಸರಿಗೆ ಖಾತೆ ಆಗಿತ್ತು ಎಂದರೇ ಇಲ್ಲ. 9ನೇ ಪ್ರತಿವಾದಿಗೆ ಮಾರಾಟ ಮಾಡಿದ ಕ್ರಯ ಪತ್ರಕ್ಕೆ 2 ಮತ್ತು 3 ನೇ ಪ್ರತಿವಾದಿ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೇ ನನಗೆ ಗೊತ್ತಿಲ್ಲ. 2007 ರಿಂದ 2026 ರವರೆಗೆ 9ನೇ ಪ್ರತಿವಾದಿ ಹೆಸರಿಗೆ 8 ಮತ್ತು 9ನೇ ಅನುಸೂಚಿ ಸ್ವತ್ತು ಖಾತೆ ಬರುತ್ತಿದೆ ಎಂದರೇ ಗೊತ್ತಿಲ್ಲ. 9ನೇ ಪ್ರತಿವಾದಿ ತನ್ನ ಮಗಳ ಗೋರಿಯಲ್ಲಿ ಆ ಸ್ವತ್ತಿನಲ್ಲಿ ಕಟ್ಟಿಕೊಂಡಿದ್ದಾರೆ ಎಂದರೇ ಗೊತ್ತಿಲ್ಲ.

4. ಸರ್ವೆ ನಂ 358 ಮತ್ತು 359 ರ ಎಸ್ ಎಂ ಹಳ್ಳಿಯಲ್ಲಿ ಇದೆ ನಾನು ಅಲ್ಲೆ ವಾಸ ಇದ್ದೇನೆ. ಅದೇ ಸರ್ವೆ ನಂ  ರಲ್ಲಿ 9ನೇ ಪ್ರತಿವಾದಿ ವ್ಯವಸಾಯ ಮಾಡಿಕೊಂಡಿದ್ದು ಅದೇಸ್ವತ್ತಿನಲ್ಲಿ ಗೋರಿ ಕಟ್ಟಿದರು

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ. ಅದೇ ಸರ್ವೆ ನಂ ನಲ್ಲಿ ಒಂದು ಕಟ್ಟಡ ಕಟ್ಟಿದ್ದಾರೆ ಎಂದರೇ ಗೊತ್ತಿಲ್ಲ. ಸುಮಾರು 20 ವರ್ಷಗಳಿಂದ 9ನೇ ಪ್ರತಿವಾದಿ 8 ಮತ್ತು 9 ಅನುಸೂಚಿ ಸ್ವತ್ತಿನಲ್ಲಿ ಸ್ವಾ ಧೀನದಲ್ಲಿ ಇದ್ದಾರೆ ಗೊತ್ತಿಲ್ಲ, ಆ ಸ್ವತ್ತನ್ನು ಬ್ಯಾಂಕಿನಲ್ಲಿ ಅಡಮಾನ ಇಟ್ಟು ರೂ 5 ಲಕ್ಷ ಸಾಲ ಪಡೆದಿದ್ದಾರೆ ಎಂದರೆ ಗೊತ್ತಿಲ್ಲ. ಈಗ ಸ್ವತ್ತುಗಳ ಬೆಲೆ ಹೆಚ್ಚಾಗಿರುವ ಕಾರಣದಿಂದ ಅವುಗಳನ್ನು ಕಬಳಿಸಲು ದಾವೆ ದಾಖಲೆ ಮಾಡಿದ್ದಾರೆ ಎಂದರೇ ಸಾಕ್ಷಿ ಮೊದಲ ಹೌದು ಎಂದು ನಂತರ ನನಗೆ ಆ ಸ್ವತ್ತಿನಲಿಲ ಭಾಗ ಬಂದಿಲ್ಲದ ಕಾರಣ ದಾವೆ ಹಾಕಿದ್ದೇನೆ. ಈ ದಾವೆಯಲ್ಲಿ ಮನೆಗಳನ್ನು ಹಾಗೂ ಇನ್ನು ಕೆಲವು ಸ್ವತ್ತುಗಳನ್ನು ಸೇರಿಸಿಲ್ಲ ಎಂದರೇ ಮನೆಯನ್ನು ಸೇರಿಸಿಲ್ಲ.

4. ಈಗಾಗಲೇ ಭಾಗ ಆಗಿ ವ್ಯವಸಾಯ ಮಾಡಿಕೊಂಡಿದ್ದರು ಸಹ 9ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**(**ಈ ಹಂತದಲ್ಲಿ **9**ನೆ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು**)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)**

ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು)**

**(ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**(ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )**